**<u>ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಕೆ.ಆರ್.ನಗರ</u>**

**<u>ಸಿ.ಸಿ. ನಂ. 1002/2017</u>**

**ಪಿರ್ಯಾದಿದಾರರುಃ** ಕೆ.ಆರ್. ನಗರ ಪೋಲೀಸ್ ಠಾಣೆ

**- ವಿರುದ್ಧ –**

**ಆರೋಪಿತರುಃ** 3. ಸುನಂದ ಬಿನ್ ಶಿವರಾಜ,
20 ವರ್ಷ,
ವಾಸಃ ಹೆಬ್ಬಾಳು ಗ್ರಾಮ,
ಕೆ.ಆರ್.ನಗರ ತಾಲ್ಲೂಕು,
ಮೈಸೂರು ಜಿಲ್ಲೆ.

**<u>ದಂ. ಪ್ರ. ಸಂ. ಕಲಂ 313 ರಡಿ 1 ನೇ ಆಪಾದಿತರ ಹೇಳಿಕೆ</u>**

ಪ್ರಶ್ನೆ 1: ಅಭಿಯೋಜನೆಯ ಪರವಾಗಿ ನುಡಿದ ಸಾಕ್ಷವನ್ನು ನೀವು ಕೇಳಿರುವಿರಾ?
ಉತ್ತರಃ

ಪ್ರಶ್ನೆ 2: ಫ್ರಾಸಾ.1 ಸ್ವಾಮಿಗೌಡ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 10.06.2013 ಮಧ್ಯಾಹ್ನ 2.30 ಗಂಟೆಗೆ ತಾನು ತಮ್ಮ ಮನೆಯ ಚಾವಣಿ ಬಿಚ್ಚುತ್ತಿದ್ದಾಗ ಚಾಸಾ.2 ಮತ್ತು 3 ರವರು ಮನೆಯ ಕೆಳಗಡೆ ಇದ್ದಾಗ 1 ನೇ ಆರೋಪಿಯಾದ ನೀವು ಜಾಗ ಬಿಟ್ಟುಕೊಡಲಿಲ್ಲವೆಂಬ ದ್ವೇಷದಿಂದ ರೀಪರ್ ಪಟ್ಟಿಯಿಂದ ಚಾಸಾ.3 ರವರ ತಲೆಗೆ ಹೊಡೆದು ರಕ್ತಗಾಯವಾಗಿರುತ್ತದೆ ಎಂದು, ನಂತರ ತನ್ನ ಪತ್ನಿ ಚಾಸಾ 2 ರವರಿಗೆ 2 ಮತ್ತು 3 ನೇ ಆರೋಪಿತರಾದ ನೀವುಗಳು ಕಾಲಿನಿಂದ ಎದೆಗೆ ಒದ್ದಿದ್ದರಿಂದ ಆಕೆ ನೆಲಕ್ಕೆ ಬಿದ್ದು ಎರಡು ಹಲ್ಲು ಮುರಿದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?
ಉತ್ತರಃ

ಪ್ರಶ್ನೆ 3: ಫ್ರಾಸಾ.1 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ಚಾವಣಿಯಿಂದ ಕೆಳಕ್ಕೆ ಇಳಿದಾಗ 1 ನೇ ಅರೋಪಿಯಾದ ನೀವು ರೀಪರ್ ಪಟ್ಟಿಯಿಂದ ತನ್ನ ಎಡಗೈ ಮುಂಗೈಗೆ ಹೊಡೆದು ಗಾಯಪಡಿಸಿರುತ್ತಾರೆಂದು, ನಂತರ ತಾನು ಚಾಸಾ 2

ಹಾಗೂ 3 ರವರು ಕೆ,ಆರ್.ನಗರದ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇವೆ ಎಂದು, ತಾವು ಆಸ್ಪತ್ರೆಯಲ್ಲಿ ಇದ್ದಾಗ ಪೋಲೀಸಿನವರು ಬಂದು ತನ್ನಿಂದ ಹೇಳಿಕೆ ಮತ್ತು ದೂರು ಪಡೆದು ಹೆಬ್ಬೆಟ್ಟು ಪಡೆದಿರುತ್ತಾರೆ ಎಂದು ಹಾಗೂ ಸದರಿ ದೂರು ಹಾಗೂ ರೀಪರ್ ಪಟ್ಟಿಯನ್ನು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?
ಉತ್ತರಃ

ಪ್ರಶ್ನೆ 4: ಫ್ರಾಸಾ.1 ರವರು ತಮ್ಮ ಪಾಟೀ ಸವಾಲಿನಲ್ಲಿ ಆರೋಪಿತರು, ತನ್ನ, ಚಾಸಾ-2 ಮತ್ತು 3 ರವರ ವಿರುದ್ಧ ಬಗ್ಗೆ ದೂರು ನೀಡಿದ ಬಗ್ಗೆ ಇದೇ ನ್ಯಾಯಾಲಯದಲ್ಲಿ ಪರಕರಣ ದಾಖಲಾಗಿದ್ದು ಇತ್ಯರ್ಥ ಬಾಕಿಯರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?
ಉತ್ತರಃ

ಪ್ರಶ್ನೆ 5: ಫ್ರಾಸಾ.2 ಮಹಾದೇವಮ್ಮ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 10.06.2013 ರಂದು ತಮ್ಮ ಮನೆಯ ಪಕ್ಕದಲ್ಲಿದ್ದ ಹಳೇಯ ಮನೆಯ ಮೇಲಾವಣಿಯನ್ನು ಬಿಚ್ಚುತ್ತಿದ್ದಾಗ ಮದ್ಯಾಹ್ನ 2-30ರ ಸಮಯಕ್ಕೆ 1ನೇ ಆರೋಪಿಯಾದ ನೀವು ಬಂದು ತನ್ನ ಗಂಡನ ಬಳಿಯಲ್ಲಿ ತನಗೆ ಒಂದು ಮೊಳ ಜಾಗ ಬಿಡಿ ಎಂದು ಕೇಳಿದರು ಎಂದು, ಆಗ ತನ್ನ ಗಂಡ ಪಂಚಾಯ್ತಿಯವರು ಈಗಾಗಲೇ ಒಂದು ಮೊಳ ಜಾಗ ಬಿಡಿಸಿದ್ದಾರೆ ಈಗ ಪುನಃ ಬಿಡಲಾಗುವುದಿಲ್ಲವೆಂದು ಹೇಳಿದಾಗ 1ನೇ ಆರೋಪಿಯಾದ ನೀವು ರಿಪೀಸ್ ಪಟ್ಟಿಯಿಂದ ಕೆಲಸ ಮಾಡುತ್ತಿದ್ದ ತನ್ನ ಮಗನ ಬಳಿಗೆ ಬಂದು ಆತನ ತಲೆಯ ಎಡಭಾಗಕ್ಕೆ ಹೊಡೆದಿದ್ದು, ಆತನಿಗೆ ಗಾಯವಾಗಿ ರಕ್ತ ಸುರಿಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?
ಉತ್ತರಃ

ಪ್ರಶ್ನೆ 6: ಫ್ರಾಸಾ.2 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ತನ್ನ ಗಂಡನಿಗೂ ಸಹ ಅದೇ ರೀಪಿಸ್ ಪಟ್ಟಿಯಿಂದ ಅವರ ಎಡ ಮುಂಗೈಗೆ ಹೊಡೆದ ಎಂದು, ತಾನು ಈ ಬಗ್ಗೆ ಕೇಳಲು ಹೋದಾಗ 1ನೇ ಆರೋಪಿಯಾದ ನೀವು ತನ್ನ ಬಾಯಿಗೆ ಕಾಲಿನಿಂದ ಒದ್ದಾಗ ತನ್ನ ಹಲ್ಲು ಮುರಿಯಿತು ಎಂದು, ಆಗ 2 ರಿಂದ 3ನೇ

ಆರೋಪಿತರಾದ ನೀವುಗಳು ಬಂದು ತನ್ನನ್ನು ಎಳೆದಾಡಿ ಕೈಯಿಂದ ತನ್ನ ಮೈಕೈಗೆಲ್ಲಾ ಹೊಡೆದು ನೋವುಂಟು ಮಾಡಿದರು ಎಂದು, ಆಗ ಅಲ್ಲಿಗೆ ಮಂಜುನಾಥ, ತಮ್ಮೇಗೌಡ ಬಂದು ಬಿಡಿಸಿ ತಮ್ಮನ್ನು ಕೆ.ಆರ್.ನಗರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದರು ಎಂದು, ದಿನಾಂಕಃ 20.06.2013 ರಂದು ಪೋಲೀಸ್ ಠಾಣೆಗೆ ಹೋಗಿ ಮುರಿದು ಹೋಗಿದ್ದ ಹಲ್ಲನ್ನು ಕೊಟ್ಟೆ ಅದನ್ನು ಪೋಲೀಸ್‌ರು ಅಮಾನತ್ತುಪಡಿಸಿಕೊಂಡರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 7: ಫ್ರಾಸಾ.2 ರವರು ತಮ್ಮ ಪಾಟೀ ಸವಾಲಿನಲ್ಲಿ ಘಟನೆಯ ಕಾಲಕ್ಕೆ ತಾನು, 1 ನೇ ಆರೋಪಿಯಾದ ನೀವು, ತನ್ನ ಮಗ ಆ ಸ್ಥಳದಲ್ಲಿದ್ದೇವು ಎಂದು, ತನ್ನ ಗಂಡ ಎಡ ಮುಂಗೈಗೆ ಆರೋಪಿಯಾದ ನೀವು ರೀಪರ್ ಪಟ್ಟಿಯಿಂದ ಹೊಡೆದಿದ್ದ, ತನ್ನ ಕೆಳ ದವಡೆಯ 4 ನೇ ಹಲ್ಲು ಮುರಿಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 8: ಫ್ರಾಸಾ.3 ವೆಂಕಟರಾಮು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 10.06.2013 ರಂದು ನಮ್ಮ ಮನೆಯ ಪಕ್ಕದಲ್ಲಿದ್ದ ಹಳೆಯ ಮನೆಯ ಮೇಲ್ಚಾವಣಿಯನ್ನು ಬಿಚ್ಚುತ್ತಿದ್ದು ಮದ್ಯಾಹ್ನ 2-30 ರ ಸಮಯಕ್ಕೆ ತಾನು ಮತ್ತು ತನ್ನ ತಾಯಿ ಹೆಂಚುಗಳನ್ನು ಕೆಳಗಡೆ ತೆಗೆದಿಡುತ್ತಿದ್ದಾಗ ಅಲ್ಲಿಗೆ 1 ನೇ ಆರೋಪಿಯಾದ ನೀವು ಬಂದು ತನ್ನ ತಂದೆ ಬಳಿಯಲ್ಲಿ ತನಗೆ ಒಂದು ಮೊಳ ಜಾಗ ಬಿಡಿ ಎಂದು ಕೇಳಿದರು ಎಂದು, ಆಗ ತನ್ನ ತಂದೆ ಪಂಚಾಯ್ತಿಯವರು ಈಗಾಗಲೇ ಒಂದು ಮೊಳ ಜಾಗ ಬಿಡಿಸಿದ್ದಾರೆ ಈಗ ಪುನಃ ಬಿಡಲಾಗುವುದಿಲ್ಲವೆಂದು ಹೇಳಿದಾಗ 1 ನೇ ಆರೋಪಿಯಾದ ನೀವು ರಿಪೀಸ್ ಪಟ್ಟಿಯಿಂದ ಕೆಲಸ ಮಾಡುತ್ತಿದ್ದ ತನ್ನ ತಲೆಯ ಎಡಭಾಗಕ್ಕೆ ಹೊಡೆದಾಗ ತನಗೆ ಗಾಯವಾಗಿ ರಕ್ತ ಸುರಿಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 9: ಪ್ರಾಸಾ.3 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ತನ್ನ ತಂದೆಗೂ ಸಹ 1 ನೇ ಆರೋಪಿಯಾದ ನೀವು ಅದೇ ರೀಪಿಸ್ ಪಟ್ಟಿಯಿಂದ ಅವರ ಎಡ ಮುಂಗೈಗೆ ಹೊಡೆದ ಎಂದು, ತನ್ನ ತಾಯಿ ಈ ಬಗ್ಗೆ ಕೇಳಲು ಹೋದಾಗ 1 ನೇ ಆರೋಪಿ ತನ್ನ ತಾಯಿಯ ಬಾಯಿಗೆ ಕಾಲಿನಿಂದ ಒದ್ದ ಆಗ ತನ್ನ ತಾಯಿಯ ಹಲ್ಲು ಮುರಿಯಿತು ಎಂದು, ಆಗ 2 ರಿಂದ 3 ನೇ ಆರೋಪಿತರಾದ ನೀವುಗಳು ಬಂದು ತನ್ನ ತಾಯಿಗೆ ಕೈಯಿಂದ ಮೈಕೈಗೆಲ್ಲಾ ಹೊಡೆದು ನೋವುಂಟು ಮಾಡಿರುತ್ತೀರಿ ಎಂದು, ನಂತರ ಅಲ್ಲಿಗೆ ಮಂಜುನಾಥ ತಮ್ಮಯ್ಯ ಮತ್ತು ವಾಸುದೇಚಾರಿ ಬಂದು ಬಿಡಿಸಿ ತಮ್ಮನ್ನು ಕೆ.ಆರ್.ನಗರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 10: ಪ್ರಾಸಾ.4 ಮಂಜುನಾಥ ಅಃ ಮಂಜೇಗೌಡ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ ಮೂರು ವರ್ಷಗಳ ಹಿಂದೆ ತಮ್ಮ ಮನೆ ಪಕ್ಕದಲ್ಲಿರುವಂತಹ ಚಾಸಾ 1 ರಿಂದ 3 ರವರು ಮನೆಯ ಹೆಂಚುಗಳನ್ನು ತೆಗೆಯುತ್ತಿದ್ದಾಗ ಅಲ್ಲಿಗೆ 1 ರಿಂದ 4 ನೇ ಆರೋಪಿಗಳಾದ ನೀವುಗಳು ಬಂದು, 1 ನೇ ಆರೋಪಿಯಾದ ನೀವು ಒಂದು ಮೊಳ ಜಾಗ ಬಿಟ್ಟು ಹೆಂಚನ್ನು ತೆಗೆಯಿರಿ ಎಂದು ಹೇಳಿದರು ಎಂದು, ಆಗ ಚಾಸಾ.1 ರವರು ಪಂಚಾಯ್ತಿಯಲ್ಲಿ ಹೇಳಿದಂತೆ ಹೆಂಚನ್ನು ತೆಗೆಯುತ್ತೇವೆ, ಹೆಚ್ಚಿಗೆ ತೆಗೆಯುವುದಿಲ್ಲವೆಂದು ಹೇಳಿದಾಗ 1 ನೇ ಆರೋಪಿಯಾದ ನೀವು ರೀಪರ್ ಪಟ್ಟಿಯಿಂದ ಚಾಸಾ.3 ರವರ ತಲೆಗೆ ಹೊಡೆದಾಗ ರಕ್ತ ಬಂತು ಎಂದು, 1 ನೇ ಆರೋಪಿಯಾದ ನೀವು ರೀಪರ್‌ಪಟ್ಟಿಯಿಂದ ಚಾಸಾ.1 ರವರ ಕೈಗೆ ಹೊಡೆದು, ಚಾಸಾ.2 ರವರಿಗೆ ಕಾಲಿನಿಂದ ಬಾಯಿಗೆ ಒದ್ದಾಗ ಆಕೆಯ ಹಲ್ಲು ಮುರಿದು ಹೋಯಿತು ಎಂದು, 2 ರಿಂದ 4 ನೇ ಆರೋಪಿಗಳಾದ ನೀವು ಚಾಸಾ 2 ರವರಿಗೆ ಕೈಗಳಿಂದ ಮೈಕೈಗೆ ಹೊಡೆದರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 11: ಪ್ರಾಸಾ.4 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ಮರುದಿನ ಪೋಲಿಸರು ಹೆಬ್ಬಾಳಿಗೆ ಬಂದಾಗ ತಾನು ಗಲಾಟೆಯಾದ ವಿಷಯವನ್ನು ತಿಳಿಸಿದೆ ಎಂದು,

ನಂತರ 10 ದಿನಗಳು ಕಳೆದ ಮೇಲೆ ಕೆ.ಆರ್.ನಗರ ಪೋಲಿಸ್ ಠಾಣೆಗೆ ಬಂದಿದ್ದೆ. ಚಾಸಾ–2 ರವರು ಮುರಿದು ಹೋಗಿದ್ದ ಹಲ್ಲನ್ನು ಹಾಜರುಪಡಿಸಿದ್ದು, ಅದನ್ನು ಪೋಲಿಸರು ಪಡೆದು ಮಹಜರ್ ಗೆ ತನ್ನ ಸಹಿಯನ್ನು ಪಡೆದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 12: ಪ್ರಾಸಾ.4 ರವರು ತಮ್ಮ ಪಾಟೀ ಸವಾಲಿನಲ್ಲಿ ಘಟನೆ ನಡೆದ ಮರುದಿನ ಪೋಲಿಸರು ಬಂದು ತನ್ನ ಸಮಕ್ಷಮ ಘಟನಾ ಸ್ಥಳದಲ್ಲಿ ಮಹಜರ್ ಮಾಡಿ ಅದೇ ಸ್ಥಳದಲ್ಲಿ ಒಂದು ಕರಡು ನಕಾಶೆಯನ್ನು ತಯಾರಿಸಿದರು ಎಂದು, 1 ನೇ ಆರೋಪಿಯಾದ ನೀವು ಸ್ವಾಮಿಗೌಡರವರ ಬಲಗೈಗೆ ಹೊಡೆದ ಎಂದು, ಚಾಸಾ–2 ರವರಿಗೆ ಬಾಯಿಗೆ ಒದಿದ್ದರಿಂದ ಹಲ್ಲು ಬಿದ್ದು ಹೋಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 13: ಪ್ರಾಸಾ.5 ತಮ್ಮಯ್ಯ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ ಮೂರು ವರ್ಷಗಳ ಹಿಂದೆ ತಾನು ತಮ್ಮ ಮನೆ ಹತ್ತಿರ ಇದ್ದಾಗ ಮದ್ಯಾಹ್ನ 2–30 ಸಮಯದಲ್ಲಿ ಕೂಗಾಟ ಕೇಳಿ ಚಾಸಾ.1 ರವರ ಮನೆಯ ಹತ್ತಿರ ಹೋದಾಗ ಚಾಸಾ 1 ರವರು ಮನೆಯ ಮೇಲಿಂದ ಹೆಂಚನ್ನು ಇಳಿಸುತ್ತಿದ್ದರು, ಚಾಸಾ 2 ಮತ್ತು 3 ರವರು ಸ್ವಾಮಿಗೌಡ ರವರು ಇಳಿಕೊಟ್ಟಂತಹ ಹೆಂಚುಗಳನ್ನು ಪಕ್ಕಕ್ಕೆ ತೆಗೆದಿಡುತ್ತಿದ್ದರು ಎಂದು, ಆಗ ಆ ಜಾಗಕ್ಕೆ 1 ನೇ ಆರೋಪಿಯಾದ ನೀವು ಬಂದು ಒಂದು ಮೊಳ ಜಾಗ ಬಿಟ್ಟು ಹೆಂಚನ್ನು ತೆಗೆಯಿರಿ ಎಂದು ಹೇಳಿದಾಗ ಚಾಸಾ 1 ಪಂಚಾಯ್ತಿಯಲ್ಲಿ ಹೇಳಿದಂತೆ ನಡೆದುಕೋ ಎಂದು ಹೇಳಿ ಕೆಳಕ್ಕೆ ಇಳಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 14: ಪ್ರಾಸಾ.5 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ 1 ನೇ ಆರೋಪಿಯಾದ ನೀವು ಗಲಾಟೆ ಮಾಡಿಕೊಂಡು ರೀಪರ್‌ಪಟ್ಟಿಯಿಂದ ಚಾಸಾ 1 ರವರ ಕೈಗೆ ಹೊಡೆದು, ನಂತರ ಅದೇ ರೀಪರ್‌ಪಟ್ಟಿಯಿಂದ ಚಾಸಾ 3 ರವರ ತಲೆಗೆ ಹೊಡೆದಾಗ ಆಗ ರಕ್ತ ಬಂತು ಎಂದು, ಉಳಿದ ಆರೋಪಿಗಳು ಜಗಳಕ್ಕೆ ಬಂದು ಚಾಸಾ 2 ರವರ ಮೈಕೈಗೆ ಹೊಡೆದರು ಎಂದು,. 1 ನೇ ಆರೋಪಿಯಾದ ನೀವು ಚಾಸಾ 2 ರವರಿಗೆ

ಕಾಲಿನಿಂದ ಬಾಯಿಗೆ ಒದ್ದಾಗ ಆಕೆಯ ಒಂದು ಹಲ್ಲು ಮುರಿದು ಹೋಯಿತು ಆಗ ತಾವು ಜಗಳ ಬಿಡಿಸಿ ಚಾಸಾ 3 ರವರನ್ನು ರಕ್ತ ಬರುತ್ತಿದ್ದರಿಂದ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 15: ಫ್ರಾಸಾ.7 ನಾಗರಾಜು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 11.06.2013 ರಂದು ತಾನು ಮನೆಯ ಹತ್ತಿರ ಇದ್ದಾಗ, ಪೋಲಿಸರು ಗಲಾಟೆ ಆಗಿದೆ ಮಹಜರ್ ಗೆ ಸಹಿ ಹಾಕಿ ಎಂದು ಚಾಸಾ-1 ರವರ ಮನೆಯ ಬಳಿ ಕರೆದುಕೊಂಡು ಹೋದರು ಎಂದು, ಚಾಸಾ-4 ರವರು ಗಲಾಟೆಯಾದ ಜಾಗವನ್ನು ತೋರಿಸಿ ಒಂದು ದೊಣ್ಣೆಯನ್ನು ಕೊಟ್ಟರು ಎಂದು, ಪೋಲಿಸರು ಮಹಜರ್ ಮಾಡಿ ತನ್ನ ಸಹಿಯನ್ನು ಪಡೆದರು ಎಂದು, ರಿಪರ್ ಪಟ್ಟಿಯನ್ನು ಮು.ಮಾ-1 ಎಂದು ಗುರುತಿಸಲಾಯಿತು. ದಿನಾಂಕಃ 20.06.2013 ರಲ್ಲಿ ಕೆ.ಆರ್. ನಗರ ಪೋಲಿಸ್ ಠಾಣೆಗೆ ಹೋದಾಗ ಅಲ್ಲಿ ಮಹದೇವಮ್ಮ ಇದ್ದರು ಎಂದು, ಅವರು ಒಂದು ಹಲ್ಲನು ಹಾಜರುಪಡಿಸಿದ್ದು, ಪೋಲಿಸರು ಮಹಜರ್ ಮಾಡಿ ಹಲ್ಲನ್ನು ಪ್ಯಾಕೆಟ್ ಹಾಕಿಕೊಂಡು ತನ್ನ ಸಹಿಯನ್ನು ಪಡೆದರು ಎಂದು, ಸದರಿ ಹಲ್ಲನ್ನು ಹಲ್ಲನ್ನು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 16: ಫ್ರಾಸಾ.7 ನಾಗರಾಜು ಇವರು ತಮ್ಮ ಪಾಟೀ ಸವಾಲಿನಲ್ಲಿ ತಾನು ಸ್ಥಳಕ್ಕೆ ಹೋದಾಗ ಚಾಸಾ-4 ಅಲ್ಲಿಯೇ ಇದ್ದರು. ಪೋಲಿಸರು ಮಹಜರ್ ಮಾಡಿ ತನ್ನ ಸಹಿ ಪಡೆದರು ಎಂದು, ತಾನು ಮಹಜರ್ ಅನ್ನು ಓದಿ, ತಿಳಿದುಕೊಂಡು ಸಹಿ ಹಾಕಿರುತ್ತೇನೆ ಎಂದು, ಹಲ್ಲು ಮಹದೇವಮ್ಮನದ್ದು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 17: ಫ್ರಾಸಾ.8 ಎನ್.ಎಂ.ಮಲ್ಲೇಶಯ್ಯ-ಮುಖ್ಯ ಪೇದೆ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ10.06.2013 ರಂದು ಕೆ.ಆರ್.ನಗರ ಸರ್ಕಾರಿ ಆಸ್ಪತ್ರೆಯಿಂದ ಬಂದ ಮೆಮೋವನ್ನು ಪಡೆದು ರಾತ್ರಿ 7.30 ಗಂಟೆಯಿಂದ 8.00 ಗಂಟೆಯ ವರೆಗೆ ಆಸ್ಪತ್ರೆಯಲ್ಲಿ ಗಾಯಾಳುವಾದ ಸ್ವಾಮಿಗೌಡ ಇವರ ಹೇಳಿಕೆಯನ್ನು ಪಡೆದು ನಂತರ

ಠಾಣೆಗೆ ತೆರಳಿ ಠಾಣಾ ಮೋಕದ್ದಮೆ ನಂ.166/2013 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನವನ್ನು ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ ಎಂದು, ದಿನಾಂಕ:11.06.2013 ರಂದು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಸದರಿ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ 4 ರವರು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ 7 ಮತ್ತು 8 ಇವರ ಸಮಕ್ಷಮದಲ್ಲಿ ಬೆಳಿಗ್ಗೆ 9.30 ರಿಂದ 10.30 ಗಂಟೆ ಸಮಯದಲ್ಲಿ ಸ್ಥಳದ ಮಹಜರ್ ಕ್ರಮವನ್ನು ಜರುಗಿಸಿ ಸ್ಥಳದಲ್ಲಿ ಹಾಜರುಪಡಿಸಿದ ರೀಪರ್ ಪಟ್ಟಿಯನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 18: ಫ್ರಾಸಾ.8 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ರೀಪರ್ ಪಟ್ಟಿಯನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 118/2013 ರಂತೆ ಅಳವಡಿಸಿರುತ್ತೇನೆ ಎಂದು, ದಿ:20.06.2013 ರಂದು ಈ ಪ್ರಕಣದ ಗಾಯಾಳು ಚಾಸಾ 2 ರವರ ಹಲ್ಲನ್ನು ಠಾಣೆಗೆ ಮದ್ಯಾಹ್ನ 3.00 ಗಂಟೆಗೆ ತಂದು ಹಾಜರುಪಡಿಸಿದ್ದು ಪಂಚರಾದ ಚಾಸಾ 4 ಮತ್ತು 8 ಇವರ ಸಮಕ್ಷಮದಲ್ಲಿ ಮಹಜರ್ ಕ್ರಮವನ್ನು ಜರುಗಿಸಿ ಸದರಿ ಹಲ್ಲನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ ಎಂದು, ಸದರಿ ಹಲ್ಲನ್ನು ಮಾಲುಪಟ್ಟಿ ಸಂಖ್ಯೆ 124/2013 ರಂತೆ ತಯಾರಿಸಿರುತ್ತೇನೆ ಎಂದು, ನಂತರ ಮುಂದಿನ ತನಿಖೆಗಾಗಿ ಸದರಿ ಪ್ರಕರಣದ ಕಡತಗಳನ್ನು ಚಾಸಾ 11 ಇವರಿಗೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 19: ಫ್ರಾಸಾ.8 ಇವರು ತಮ್ಮ ಪಾಟೀ ಸವಾಲಿನಲ್ಲಿ ಚಾಸಾ-2 ರವರು ತಮ್ಮ ಹೇಳಿಕೆಯಲ್ಲಿ ಹಲ್ಲು ಬಿದ್ದು ಹೋಗಿರುವ ಬಗ್ಗೆ ಹೇಳಿದ್ದು, ತಾನು ಅವರಿಗೆ ಸದರಿ ಬಿದ್ದು ಹೋದ ಹಲ್ಲನ್ನು ಠಾಣೆಗೆ ತಂದು ಹಾಜರುಪಡಿಸುವಂತೆ ಹೇಳಿರುತ್ತೇನೆಂದು, 2 ನೇ ಆರೋಪಿಯಾದ ನೀವು ಚಾಸಾ.2 ರವರಿಗೆ ಒದ್ದ ತಕ್ಷಣ ಘಟನಾ ಸ್ಥಳದಲ್ಲಿ ಹಲ್ಲು ಬಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 20: ಫ್ರಾಸಾ.9 ಡಾ.ಮಾದವ್ ಇವರು ಮುಖ್ಯ ವಿಚಾರಣೆಯಲ್ಲಿ ದಿ10.06.2013 ರಂದು ಮದ್ಯಾಹ್ನ 2.30 ಗಂಟೆ ಸಮಯದಲ್ಲಿ ಚಾಸಾ 3 ರವರ ಹಲ್ಲೆಯ ಹಿನ್ನಲೆಯಲ್ಲಿ ಆಸ್ಪತ್ರೆಗೆ ಬಂದಿದ್ದು ಅವರನ್ನು ತಪಾಸಣೆಗೆ ಒಳಪಡಿಸಲಾಗಿ ಅವರ ತಲೆಯ ಎಡಭಾಗದಲ್ಲಿ 8 X I ಸೆಂ.ಮೀ ಅಳತೆಯ ತಲೆಯ ಚರ್ಮದ ಆಳದ ಹರಿದ ಗಾಯ ಆಗಿದ್ದು ಕಂಡು ಬಂದಿದ್ದು ಸದರಿ ಗಾಯವು ಸಾಮಾನ್ಯ ಸ್ವರೂಪದ ಗಾಯವಾಗಿದ್ದು ಹಾಗೂ ಗಾಯದ ವಯಸ್ಸು ತಾಜಾ ಆಗಿರುತ್ತದೆ ಎಂದು, ರೀಪರ್ ಪಟ್ಟಿಯಂತಹ ವಸ್ತುವಿನಿಂದ ಯಾವುದೇ ವ್ಯಕ್ತಿಯ ತಲೆಗೆ ಹೊಡೆದರೆ ಮೇಲ್ಕಂಡ ಗಾಯಾವಾಗುವ ಸಾಧ್ಯತೆ ಇದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 21: ಫ್ರಾಸಾ.9 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ಅದೇ ದಿನ ಮದ್ಯಾಹ್ನ 3.00 ಗಂಟೆ ಸಮಯದಲ್ಲಿ ಚಾಸಾ 1 ರವರು ಗಾಯದ ಹಿನ್ನಲೆಯಲ್ಲಿ ಆಸ್ಪತ್ರೆಗೆ ಬಂದಿದ್ದು ಅವರನ್ನು ತಪಾಸಣೆಗೆ ಒಳಪಡಿಸಲಾಗಿ ಅವರ ಎಡಗೈ ಉಂಗುರದ ಬೆರಳು ಡೊಂಕಾಗಿದ್ದು ಕಂಡು ಬಂದಿದ್ದು, ಅದೇ ರೀತಿ ಎಡಗೈನ ಮುಂಗೈಗೆ 2 X I ತರಚಿದ ಗಾಯ, ಸದರಿ ಇವರಿಗೆ ಕ್ಷ ಕಿರಣ ಪರೀಕ್ಷೆಯನ್ನು ಮಾಡಿಸಿದ್ದು ಎಡಗೈನ ಉಂಗುರ ಬೆರಳಿನ ಕೀಲು ತನ್ನ ಸಾಮಾನ್ಯ ಜಾಗದಿಂದ ಜಾರುಗಿಕೊಂಡಿದ್ದು ಕಂಡುಬಂದಿಂತು ಎಂದು, ನಂತರ ಅವರಿಗೆ ಹೆಚ್ಚಿನ ಚಿಕಿತ್ಸೆಗಾಗಿ ಕೀಲು ಮತ್ತು ಮೂಳೆ ತಜ್ಞರ ಬಳಿ ಕಳುಹಿಸಿಕೊಡಲಾಯಿತು ಎಂದು, ಸದರಿ ಗಾಯದಲ್ಲಿ ಮೊದಲನೆ ಗಾಯವು ತೀವ್ರ ಸ್ವರೂಪದ ಹಾಗೂ ತಾಜಾಗಾಯ ಗಾಯ ಎಂದು, 2 ನೇ ಗಾಯ ಸಾಮಾನ್ಯ ಸ್ವರೂಪದ ತಾಜಾ ಗಾಯ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 22: ಫ್ರಾಸಾ.9 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ಅದೇ ರೀತಿ 3.10 ಗಂಟೆ ಚಾಸಾ 2 ಇವರು ಗಾಯದ ಹಿನ್ನಲೆಯಲ್ಲಿ ಆಸ್ಪತ್ರೆಗೆ ಬಂದಿದ್ದು ಅವರನ್ನು ತಪಾಸಣೆಗೆ ಒಳಪಡಿಸಲಾಗಿ ಚಾಸಾ 2 ರವರ ದವಡೆಯ ಬಲ ಮೇಲ್ಭಾಗದ ಹಲ್ಲು ಇರಲಿಲ್ಲ ಆ ಸ್ಥಳದಲ್ಲಿ ರಕ್ತ ಸ್ರಾವವಾಗುತ್ತಿದ್ದು ಕಂಡು ಬಂದಿತು ಎಂದು, ಸದರಿಯವರ ಎದೆಯ ಎಲ್ಲಾ ಭಾಗದಲ್ಲಿ ನೋವು ಕಂಡು ಬಂದಿದ್ದು, ಬೆನ್ನಿನ ಸಂಪೂರ್ಣ ಭಾದಲ್ಲಿ ನೋವು ಕಂಡು ಬಂದಿದ್ದು ಎಂದು, ನಂತರ ತಲೆಯ ಎಲ್ಲಾ ಭಾಗದಲ್ಲಿ ನೋವು ಕಂಡು

ಬಂದಿದ್ದು ಸದರಿ ಗಾಯಗಳಲ್ಲಿ ಮೊದಲನೇ ಗಾಯವು ತೀವ್ರ ಸ್ವರೂಪದ ತಾಜಾಗಾಯವಾಗಿದ್ದು ಎಂದು, ಅದೇ ರೀತಿ 2 ರಿಂದ 4 ನೇ ಗಾಯಗಳು ಸಾಮಾನ್ಯ ಸ್ವರೂಪದ ತಾಜಾ ಗಾಯಗಳು ಎಂದು, ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ ಗುದ್ದಿದಾಗ ಹಾಗೂ ಒದ್ದಿದಾಗ ಈ ಮೇಲೆ ಹೇಳಿದ ಗಾಯಗಳು ಆಗುತ್ತವೆ ಎಂದು, ಸ್ವಾಮಿಗೌಡ, ವೆಂಕಟೇಗೌಡ, ಮಹಾದೇವಮ್ಮ ರವರ ಕೇಸ್ ಶೀಟ್ ಅನ್ನು ಹಾಗೂ ಎರಡು ಎಕ್ಸ್-ರೇ ದಾಖಲೆಗಳನ್ನು ಹಾಜರುಪಡಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 23: ಫ್ರಾಸಾ.9 ರವರು ತಮ್ಮ ಪಾಟೀ ಸವಾಲಿನಲ್ಲಿ ಚಾಸಾ-1 ರವರಿಗೆ ಆದ ಮುರಿತ ಗಾಯಕ್ಕೆ ಕೀಲು ಮತ್ತು ಮೂಳೆ ತಜ್ಞರಾದ ಡಾಃ ಗೌತಮ್ ರವರು ಚಿಕಿತ್ಸೆ ನೀಡಿರುತ್ತಾರೆ ಎಂದು, ಚಾಸಾ-2 ರವರ ಹಲ್ಲಿನಲ್ಲಿ ರಕ್ತಗಾಯವಾದ ಕಾರಣ ಅವರನ್ನು ಹಲ್ಲಿನ ವೈದ್ಯರು ಪರೀಕ್ಷಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ.24: ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುವಿರಾ?

ಉತ್ತರಃ

ಪ್ರಶ್ನೆ.25: ನಿಮಗೆ ಈ ಪ್ರಕರಣದಲ್ಲಿ ಏನನ್ನಾದರೂ ಹೇಳುವುದು ಇದೆಯಾ?

ಉತ್ತರಃ

ಪ್ರಶ್ನೆ.26: ನಿಮಗೆ ಈ ಪ್ರಕರಣದಲ್ಲಿ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ದಾಖಲೆಗಳನ್ನು ಸಲ್ಲಿಸುವುದು ಇದೆಯಾ?

ಉತ್ತರಃ

(ಈ ಮೇಲೆ ಹೇಳಿದ ಸಾಕ್ಷಿಯ ಹೇಳಿಕೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡು ದೃಢೀಕರಿಸಲಾಯಿತು)

ದಿನಾಂಕಃ

ಹೆಚ್ಚುವರಿ ಸಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಕೃಷ್ಣರಾಜನಗರ.